## ಕೇಳಿ ತಿಳಿಯಿರಿ

**? ಪ್ರಾಪಂಚಿಕ ಆಸಕ್ತಿಗಳನ್ನು ಕಡಿಮೆ ಮಾಡಿಕೊಳ್ಳುವುದು ಹೇಗೆ?**

☆ "ಕಲ್ಲುಸಕ್ಕರೆಯ ಸವಿಯನ್ನು ಒಮ್ಮೆ ರುಚಿನೋಡಿದರೆ ಮತ್ತೆ ಬೆಲ್ಲದ ಕಡೆಗೆ ಮನಸ್ಸು ಹೋಗುವುದಿಲ್ಲ" ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ನಾವು ಈ ಬಾಹ್ಯ ಜಗತ್ತಿನ ದೃಶ್ಯಗಳನ್ನು, ಶಬ್ದಗಳನ್ನು, ರುಚಿಗಳನ್ನು ಪಂಚೇಂದ್ರಿಯಗಳ ಮೂಲಕ ಆಸ್ವಾದಿಸುತ್ತಾ, ಅದರಲ್ಲೇ ತೃಪ್ತರಾಗಿಬಿಟ್ಟಿದ್ದೇವೆ. ನಮ್ಮಲ್ಲಿರುವ ಆತ್ಮದಿಂದ ದೊರೆಯುವ ಶಾಶ್ವತ ಆನಂದವನ್ನು ಮರೆತೇಬಿಟ್ಟಿದ್ದೇವೆ. ಎಲ್ಲಿಯ ತನಕ ಆ ಆನಂದದ ಅನುಭವ ನಮಗೆ ಸ್ವಲ್ಪವಾದರೂ ಆಗುವುದಿಲ್ಲವೋ ಅಲ್ಲಿಯ ತನಕ ಈ ಪ್ರಾಪಂಚಿಕ ಬೆಲ್ಲದ ಮೇಲಿನ ಆಸಕ್ತಿಯನ್ನು ಸಂಪೂರ್ಣವಾಗಿ ಬಿಡಲಾರೆವು. ಶ್ರೀರಾಮಕೃಷ್ಣರ ದಿವ್ಯಜೀವನ ಹಾಗೂ ಸಂದೇಶಗಳ ಕುರಿತು ಭಾವಿಸಿದರೆ, ಶ್ರೀಮಾತೆಯ ಅವ್ಯಾಜ ಕರುಣೆ ಹಾಗೂ ಮಮತೆಗಳನ್ನು ಕುರಿತು ಧ್ಯಾನಿಸಿದರೆ, ಸ್ವಾಮಿ ವಿವೇಕಾನಂದರ ಸ್ಫೂರ್ತಿದಾಯಕ ಚಿಂತನೆಗಳ ಆಧಾರದ ಮೇಲೆ ಜೀವನವನ್ನು ರೂಪಿಸಿಕೊಂಡರೆ, ಸ್ವಲ್ಪ ಮಟ್ಟಿಗಾದರೂ ಇವುಗಳನ್ನು ಅನುಸರಿಸಿದರೆ, ನಿಶ್ಚಿತವಾಗಿ ಸಾಧನೆಯ ಬಾಗಿಲು ತೆರೆದೇ ತೆರೆಯುವುದು! ಅನಂತ ಶಾಂತಿಯ ಸಾಗರದ ಒಂದು ತುಣುಕಿನ ದರ್ಶನವಾದರೂ ಸಾಕು! ಆಗ ಮತ್ತಷ್ಟು ಬೇಕು ಎಂಬ ಹಂಬಲ ತೀವ್ರವಾಗಿ ಇತರ ಆಸಕ್ತಿಗಳೆಲ್ಲ ತಾವಾಗಿಯೇ ಹಿಂದೆಬೀಳುವುವು.

**? ನಾವು ಮಾಡುವ ಕೆಲಸಗಳೆಲ್ಲ ಮೋಕ್ಷಕ್ಕೆ ಪೂರಕವೇ? ಅಥವಾ ಪೂಜೆ, ಹವನ, ಸೇವೆ– ಇಂತಹ ಕೆಲಸಗಳನ್ನು ಮಾತ್ರ ಮಾಡಬೇಕೆ?**

☆ ನಾವು ನಾನಾ ಬಗೆಯ ಕೆಲಸಗಳಲ್ಲಿ ತೊಡಗಿರುತ್ತೇವೆ. ಅವುಗಳಲ್ಲಿ ಕೆಲವು ಪವಿತ್ರವಾದವು, ಅವುಗಳನ್ನು ಆಧ್ಯಾತ್ಮಿಕ ಕ್ರಿಯೆಗಳು ಎಂದು ಭಾವಿಸುತ್ತೇವೆ. ದೇವರ ಪೂಜೆ, ದಾನ, ಆಧ್ಯಾತ್ಮಿಕ ಗ್ರಂಥಗಳ ಪ್ರವಚನ, ಶ್ರವಣ, ಇವು ನಮ್ಮನ್ನು ಈ ಜಗತ್ತಿನ ಬಂಧನದಿಂದ ಬಿಡಿಸಬಲ್ಲವು ಎಂದೇ ನಮ್ಮ ಕಲ್ಪನೆ. ಇವು ನಮ್ಮನ್ನು ಈ ಜಗತ್ತಿಗೆ ಮತ್ತಷ್ಟು ಕಟ್ಟಿಹಾಕುವುವು! ತೀವ್ರವಾಗಿ ಮುಕ್ತನಾಗಬಯಸುವವನು ಹಿಂದೆ ನೋಡಲಾರ. ನಾನು ಈ ಜಗತ್ತಿನ ಒಂದು ತುತ್ತನ್ನು ಬಾಯಿಗೆ ಇಡಲು ಹೊರಟರೆ ಇಡೀ ಜಗತ್ತೇ ಅದರೊಂದಿಗೆ ಹಿಂಬಾಲಿಸುತ್ತದೆ! ಒಂದು ಹರಿವಾಣದಲ್ಲಿ ಅನೇಕ ಬಗೆಯ ವಸ್ತುಗಳಿದ್ದು, ಅದರಲ್ಲಿ ಒಂದು ವಸ್ತು ನನಗೆ ಬೇಕಿದ್ದರೆ, ಆಗ ನಾನು ಹರಿವಾಣದ ಅಸ್ತಿತ್ವವನ್ನೂ ಸ್ವೀಕರಿಸಿದಂತೆ ಆಯಿತಲ್ಲವೇ? ಆದ್ದರಿಂದ ಭಗವಂತ ಹೇಳಿದ, **ದುಃಖೇಷ್ವನುದ್ವಿಗ್ನಮನಾಃ.** .. (ಗೀತಾ, ೨.೫೬) ಮುನಿಯಾದವನು ದುಃಖಗಳಲ್ಲಿ ಉದ್ವೇಗಗೊಳ್ಳದ ಮನಸ್ಸುಳ್ಳವನೂ, ಸುಖಗಳಲ್ಲಿ ಆಶೆಯಿಲ್ಲದವನೂ ಆಗಿರುತ್ತಾನೆ. ಈ ಜಗತ್ತನ್ನು ಮೀರಿ ನಿಂತಿರುವ ಭಗವಂತನನ್ನು ಪಡೆಯಬೇಕಾದರೆ ಈ ಜಗತ್ತಿನ ಒಳ್ಳೆಯದು, ಕೆಟ್ಟದ್ದು ಎಂಬ ಎರಡನ್ನೂ ದಾಟಬೇಕು.

**? ಎಲ್ಲವನ್ನೂ ಬಿಡುವುದು ಎಂದರೆ ಹೇಗೆ? ನಾವು ಮಾಡಬೇಕಾದ ಕರ್ಮಗಳು ಇಲ್ಲವೇ?**

☆ ಅನೇಕ ಜನ್ಮಗಳಿಂದ ನಾವು ಪಡೆದುಕೊಂಡು ಬಂದಿರುವ ಸಂಸ್ಕಾರಗಳ ಪ್ರಬಲ ಸೆಳೆತದಿಂದಾಗಿ ನಾವು ಈ ಜಗತ್ತನ್ನು ಒಮ್ಮೆಲೇ ತ್ಯಜಿಸಲಾರೆವು. ಆದ್ದರಿಂದ ಒಂದೊಂದಾಗಿ ಆಸಕ್ತಿಗಳನ್ನು ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸುವುದು ಒಳ್ಳೆಯದು. ಭಗವಂತನತ್ತ ಹೋಗಲು ಈ ಮಾರ್ಗದ ಮೂಲಕ ಸಾಗಿದರೆ ಅನೇಕ ವರ್ಷಗಳ ಕಾಲ ನಾವು ಹೆಣಗಬೇಕಾಗುತ್ತದೆ. ಜಗತ್ತನ್ನು ತ್ಯಜಿಸುವುದೆಂದರೆ ಈ ಜಗತ್ತಿನ ಆಕರ್ಷಣೆಗಳಲ್ಲಿ ಅನಾಸಕ್ತನಾಗಿರುವುದು, ಲೌಕಿಕತೆಯನ್ನು ತ್ಯಜಿಸುವುದು ಹಾಗೂ ಭಗವಂತನಲ್ಲಿ ಸಂಪೂರ್ಣವಾಗಿ ಅನುರಕ್ತನಾಗಿರುವುದು. ಮನೆಯನ್ನು ತ್ಯಜಿಸಿ ಸುಮ್ಮನೆ ಗಂಗೆಯ ದಡದಲ್ಲಿ ಕುಳಿತರೆ ಏನು ಪ್ರಯೋಜನ? ಮನೆಯಲ್ಲಿದ್ದು, ಎಲ್ಲವನ್ನೂ ಎಂದಿನಂತೆ ಮಾಡುತ್ತ, ಮನಸ್ಸನ್ನು ಭಗವಂತನಲ್ಲಿ ಕೇಂದ್ರೀಕರಿಸುವುದೇ ಉತ್ತಮವಲ್ಲವೇ? ಖಂಡಿತವಾಗಿಯೂ ಇದೇ ಉತ್ತಮ ಮಾರ್ಗ. ನಮ್ಮ ಸಂಪೂರ್ಣ ಮನಸ್ಸನ್ನು ಭಗವಂತನಲ್ಲಿ ಇಡುವ ತನಕ, ಈ ಜಗತ್ತಿನ ವ್ಯಾಮೋಹ ನಮ್ಮಿಂದ ಪೂರ್ಣವಾಗಿ ದೂರವಾಗದ ತನಕ, ನಾವು ನಾನಾ ಕರ್ತವ್ಯಗಳ ಹೆಸರಿನಲ್ಲಿ ಇದಕ್ಕೆ ಅಂಟಿಕೊಳ್ಳಲು ಪ್ರಯತ್ನಿಸುತ್ತಿರುತ್ತೇವೆ. ಆದ್ದರಿಂದಲೇ ನೀತಿ, ರಾಜಕೀಯ ಇತ್ಯಾದಿ ವಿಚಾರಗಳು ನಮ್ಮ ಮನಸ್ಸಿನಲ್ಲಿ ಏಳುತ್ತವೆ. ಆದರೆ ಕೇವಲ ಭಗವಂತನಲ್ಲೇ ಆಸಕ್ತಿಯುಳ್ಳವನಿಗೆ ಮಾತ್ರ ಗೊತ್ತು "ಅವನನ್ನು ಬಿಟ್ಟು ಬೇರಾವುದೂ ಉಪಯೋಗಕ್ಕೆ ಬಾರದೆಂದು". ಭಗವಂತ ಹೇಳಿದ್ದಾನೆ, **ಸರ್ವ ಧರ್ಮಾನ್ ಪರಿತ್ಯಜ್ಯ**—ಎಲ್ಲ ಧರ್ಮಗಳನ್ನೂ ಬಿಟ್ಟು (ಗೀತಾ, ೧೮.೬೬); **ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ**—ನನ್ನಲ್ಲಿಯೇ ಮನಸ್ಸನ್ನು ಇಡು, ನನ್ನಲ್ಲಿ ಬುದ್ಧಿಯನ್ನು ನೆಲೆ ಗೊಳಿಸು (ಗೀತಾ ೧೨.೮).

ನಾವು ಮಾಡಬೇಕಾಗಿರುವುದು ಇಷ್ಟೇ: ಮುಂದುವರಿದವರ ಸಂಗವನ್ನು ಬಯಸಿ ಅವರ ಸಹಾಯದಿಂದ ನಾವೂ ಮುಂದುವರಿಯಲು ಪ್ರಯತ್ನಿಸಬೇಕು. ಸಂಶಯಗಳಿಂದ ಕುಗ್ಗುತ್ತಿರುವವರನ್ನು ಹಿಂದೆ ಬಿಟ್ಟು ಸಾಗಬೇಕು. ಮೋರಿ, ಚರಂಡಿಗಳನ್ನು ಒಮ್ಮೆಲೆ ದಾಟಿ ಮುಕ್ತರಾಗಿ ಹಾರಬೇಕು. ನಮ್ಮನ್ನು ಹಿಂದಕ್ಕೆ ಸೆಳೆಯುವುದನ್ನೆಲ್ಲ ನಿರ್ದಾಕ್ಷಿಣ್ಯವಾಗಿ ಕಿತ್ತೊಗೆಯಬೇಕು. 'ಮುಂದುವರಿ'—ಇದೇ ನಮ್ಮ ಮೂಲಮಂತ್ರವಾಗಬೇಕು. ಶ್ರೀರಾಮಕೃಷ್ಣರು ಇದನ್ನು ನಮಗೆ ಹೇಳಿಕೊಟ್ಟಿದ್ದಾರೆ, "ಮುಂದುವರಿ, ಮುಂದುವರಿ, ಆಗ ಯಾವ ದುಃಖವೂ ಇರುವುದಿಲ್ಲ. ಹಿಂದಿನ ಎಲ್ಲ ದುಃಖಗಳನ್ನೂ ಮರೆತುಬಿಡು."

ಸ್ವಾಮಿ ಪ್ರೇಮೇಶಾನಂದಜಿಯವರ ಪ್ರಶ್ನೋತ್ತರಗಳಿಂದ ಆಯ್ದ ಭಾಗ